## ಸೀಟಿಗಾಗಿ ಡಿಮ್ಯಾಂಡು!

‘ಶಂಖ ಹಿಡಿದು ಕುಳಿತ ಖಾಸಗಿ ಶಾಲೆಯಲ್ಲಿ ಮಾತ್ರ ತೀರ್ಥ ಸಿಗುವುದು’ ಎಂದು ನಂಬಿ ತಮ್ಮ ಮಕ್ಕಳನ್ನು ಸೇರಿಸಲು ಧಾವಂತ ಪಡುತ್ತಿರುವ ಪೋಷಕರು ಕೂಡಾ ಇಲ್ಲೊಂದು ಅವಕಾಶ ಕೇಳುವ ಮಟ್ಟಿಗೆ ಈ ಶಾಲೆಯ ಡಿಮ್ಯಾಂಡ್ ಏರಿದೆ. ಶಾಸಕರಾದಿ ಜನಪ್ರತಿನಿಧಿಗಳು, ಖ್ಯಾತನಾಮರ ಮೂಲಕವೂ ಒಂದು ಮಾತು ಹೇಳಿಸಿ ಸೀಟಿಗಾಗಿ ಪ್ರಯತ್ನ ನಡೆಸುವ ಪ್ರಸಂಗಗಳೂ ಇವೆ. ಈ ಶಾಲೆಯಲ್ಲಿ ಒಂದೆರಡು ವರ್ಷ ಕಲಿತ ಮಕ್ಕಳು ಸಮರ್ಥವಾಗಿ ತಮ್ಮ ಗುರಿಯತ್ತ ಸಾಗುತ್ತಾರೆ ಎಂಬ ನಂಬಿಕೆ ಜನರಲ್ಲಿ ಬೆಳೆದಿದೆ. ಆದರೆ ಈ ಶಾಲೆಯ ಮುಖ್ಯೋಪಾಧ್ಯಾಯರು ಸಾಧ್ಯವಾದಷ್ಟು ಹೆಚ್ಚು ಮಕ್ಕಳಿಗೆ ಅವಕಾಶ ಕೊಡುವ ಪ್ರಯತ್ನದ ಜೊತೆ ಮೊದಲು ಬಂದವರಿಗೆ, ಆರ್ಥಿಕವಾಗಿ ಶಕ್ತಿ ಇಲ್ಲದವರಿಗೆ ಆದ್ಯತೆ ನೀಡುತ್ತಾ ಬಂದಿದ್ದಾರೆ.




ಯಕ್ಷಗಾನ ತರಬೇತಿ

ಮಾರ್ಗದರ್ಶನ, ಸಹಕಾರ ನೀಡಿ— ಎಂದು ಕೈ ಮುಗಿದು ಬೀಳ್ಕೊಡುತ್ತಾರೆ.

—ಇದು ಕಾರ್ಕಳ ಸುಂದರ ಪುರಾಣಿಕ ಸಂಯುಕ್ತ ಸರಕಾರಿ ಪ್ರೌಢಶಾಲೆಯ ಸಾಧನೆ. ಕನ್ನಡ ಮಾಧ್ಯಮ ಸರಕಾರಿ ಪ್ರೌಢಶಾಲೆಯ ಯಶೋಗಾಥೆ.

ಸರಕಾರದಿಂದಲೇ ಅನುಮತಿ ಪಡೆದು ಶಿಕ್ಷಣ ರಂಗ ಪ್ರವೇಶಿಸಿದ ಖಾಸಗಿ ಶಾಲೆಗಳ ವ್ಯವಸ್ಥೆ ಇವತ್ತು ದುಬಾರಿಯಾಗಿ ಪರಿಣಮಿಸಿದೆ. ಸರ್ಕಾರಿ ಶಾಲೆಗಳತ್ತ ಮುಖ ಮಾಡೋಣವೆಂದರೆ, ಅಲ್ಲಿ ಅವ್ಯವಸ್ಥೆಗಳು ತಾಂಡವವಾಡುತ್ತವೆ. ಶಿಕ್ಷಕರ ಆಯ್ಕೆಯಲ್ಲಿ ಬೇಜವಾಬ್ದಾರಿತನ, ಶಾಲಾ ಕಟ್ಟಡಗಳ ದುಸ್ಥಿತಿ, ಗುಣಮಟ್ಟದ ಶಿಕ್ಷಣ ದೊರೆಯದಿರುವ ದೋಷಗಳೂ ಸೇರಿದಂತೆ ಇಲಾಖೆಯ ಕಳಪೆ ನಿರ್ವಹಣೆ ಸರ್ಕಾರಿ ಶಾಲೆಗಳ ಮೇಲಿನ ಜನರ ವಿಶ್ವಾಸವನ್ನು ಕರಗಿಸಿದ್ದು ಎಲ್ಲೆಡೆ ಕಂಡುಬರುತ್ತಿದೆ.

ಸರಕಾರಿ ಶಿಕ್ಷಣ ವ್ಯವಸ್ಥೆ ಜತೆ ಹೋಲಿಸಿದರೆ ಖಾಸಗಿ ವ್ಯವಸ್ಥೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸೀಮೋಲ್ಲಂಘನವನ್ನೇ ಸಾಧಿಸಿವೆ. ಜಾಗತೀಕರಣದ ಹಿನ್ನೆಲೆಯಲ್ಲಿ ಎದುರಾದ ಸ್ಪರ್ಧಾತ್ಮಕತೆಗೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಮುಂಚೂಣಿಯಲ್ಲಿವೆ ಎನ್ನುವುದು ನಿಜವೇ. ಆದರೆ ಅದು ಸೀಟು ಖರೀದಿಯ ಸಾಮರ್ಥ್ಯ ಇದ್ದವರಿಗೆ ಮಾತ್ರ. ಶ್ರೀಸಾಮಾನ್ಯನ ಮಟ್ಟಿಗೆ ಈ ಹೆಗ್ಗಳಿಕೆ, ಅನುಕೂಲ ಕೈಗೆಟುಕದ ಸಂಗತಿ.

ಇಂತಹ ಸನ್ನಿವೇಶದ ನಡುವೆಯೂ ಅಲ್ಲೊಂದು ಇಲ್ಲೊಂದು ಸರ್ಕಾರಿ ಶಾಲೆಗಳು ಆಶಾಕಿರಣವಾಗಿ, ಭರವಸೆಯ ಆಕಾಶದ ಮಿನುಗುತಾರೆಗಳಾಗಿ ಗಮನ ಸೆಳೆಯುತ್ತವೆ. ಕಾರ್ಕಳದಲ್ಲಿ ಸರಕಾರಿ ಸ್ವಾಮ್ಯದ, ಸುಂದರ ಪುರಾಣಿಕ ಸರಕಾರಿ ಸಂಯುಕ್ತ ಪ್ರೌಢಶಾಲೆ ಇಂತಹದೊಂದು ಹೆಗ್ಗಳಿಕೆಯನ್ನು ತನ್ನದಾಗಿಸಿಕೊಂಡಿದೆ.

ಶಾಲಾ ಪರಿಸರ ಮತ್ತು ಭೌತಿಕ ಸೌಲಭ್ಯ, ಕಲಿಕಾ ಪರಿಸರ, ನಾಯಕತ್ವ, ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಉತ್ತಮ ನಾವೀನ್ಯತೆಗಳ ಸಮರ್ಥ ಬಳಕೆ ವಿಷಯಗಳನ್ನೊಳಗೊಂಡ 5 ಅಂಶಗಳ ಮೌಲ್ಯಾಂಕನಕ್ಕಾಗಿ ಇಲಾಖಾ ಮಟ್ಟದಲ್ಲಿ ರಚಿತವಾದ ‘ಕರ್ನಾಟಕ ಶಾಲಾ ಗುಣಮಟ್ಟ, ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು’ (ಎಸ್.ಕೆ.ಕ್ಯೂ.ವಿ.ಎ.ಸಿ) ಈ ಶಾಲೆಯನ್ನು ಗುರುತಿಸಿದೆ.

ಸರಕಾರ ಕೊಡಮಾಡುವ ಶಿಕ್ಷಣ ರಂಗದ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ ಮತ್ತು ಸರಕಾರದ ಸೌಲಭ್ಯಗಳನ್ನು ಒಂದೂ ಬಿಡದೆ ಬಳಸಿಕೊಂಡ ಈ ಶಾಲೆ ಉಡುಪಿ ಜಿಲ್ಲೆಯ ಅತ್ಯುತ್ತಮ ಶಾಲೆಗಳ ಅಗ್ರಪಂಕ್ತಿಯಲ್ಲಿದೆ. ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಅನುಷ್ಠಾನಗೊಳಿಸುವ ಯೋಜನೆಗಳು ಪ್ರಥಮವಾಗಿ